ಸಿ.ಸಿ. ನಂಬರ್‌:**3052/2023**
ಸಿ.ಡಬ್ಲ್ಯೂ:**2** ಪಿ.ಡಬ್ಲ್ಯೂ:**2**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್‌:**3052/2023**

| | |
|---|---|
| ಸಾಕ್ಷಿಯ ಹೆಸರು | : ಆನಂದ |
| ತಂದೆಯ ಹೆಸರು | : ಮಲ್ಲಪ್ಪ ಸಪೂರಿ |
| ವಯಸ್ಸು | : 30 ವರ್ಷ |
| ಉದ್ಯೋಗ | : ಆಟೋಚಾಲಕ |
| ವಾಸಸ್ಥಳ | : ಕಮಲಾಪುರ, ಧಾರವಾಡ |

ದಿ: **03-12-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ:

ನನಗೆ ಚಾಸಾ.3 ರವರ ಪರಿಚಯವಿರುತ್ತದೆ. ಸಾಕ್ಷಿಯು ಜಪ್ತಿ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿ: 18-06-2022 ರಂದು ಗೋಕುಲ ರೋಡ್ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆ ಮಾಡಿ, 7 ಮೊಬೈಲ್ ಫೋನ್ ಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಸದರಿ ಮೊಬೈಲ್ ಗಳನ್ನುಹಾಜರು ಪಡಿಸಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಹೊರಗಡೆ ಇರುತ್ತಾರೆ ಎಂದು ಹೇಳುತ್ತಾರೆ. ನಾಲು ರೆಡಮಿ ಮೊಬೈಲ್ ಗಳು, ಎರಡು ವಿವೋ ಮೊಬೈಲ್ ಗಳು ಹಾಗೂ ಒಂದು ಟೆಕ್ನೊ ಮೊಬೈಲ್ ನ್ನು ಜಪ್ತಿ ಪಡಿಸಿರುತ್ತಾರೆ. ಸದರಿ ಮೊಬೈಲ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ರಾತ್ರಿ 8.00 ರಿಂದ 10.00 ಗಂಟೆಯವರೆ ಸದರಿ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಸಿ ಪಿ ಐ ಮತ್ತು ಇಬ್ಬರು ಪೋಲಿಸರು ಇದ್ದರು.

ದೋಷಾರೋಪಣೆ ಪಟ್ಟಿಯ ಜೊತೆಗೆ ಜಪ್ತಿ ಪಡಿಸಿದ ಮೊಬೈಲ್ ಗಳ ಛಾಯಾಚಿತ್ರ ಇರುವುದಿಲ್ಲ ಹಾಗೂ ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಿದ ಕಾಲಕ್ಕೆ ತೆಗೆದಿರುವ ಛಾಯಾಚಿತ್ರಗಳು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಹಾಗಾಗಿ ಸದರಿ ಮೊಬೈಲ್ ಗಳನ್ನು ಸಾಕ್ಷಿಗೆ ಗುರುತಿಸಲು ತೋರಿಸಿರುವುದಿಲ್ಲ.

***(****ಈ ಹಂತದಲ್ಲಿ ಮಾನ್ಯ ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು****.)***

ಪಾಟೀಸವಾಲುಃ ಶ್ರೀ.ಸ.ಸ.ಅ. ಅವರಿಂದಃ

ನನ್ನ ಹಾಗೂ ಚಾಸಾ.3 ಸಮಕ್ಷಮ 2 ರಿಂದ 6 ಹಾಗೂ 8 ಮತ್ತು 9 ನೇ ಆರೋಪಿತರು ಹಾಜರು ಪಡಿಸಿರುವ ತಮ್ಮ ಮೊಬೈಲ್ ಗಳನ್ನು ಪೋಲಿಸರು ನಿಪಿ.3 ರಂತೆ ಜಪ್ತಿ ಪಂಚನಾಮೆ ಮಾಡಿ ಜಪ್ತಿ ಪಡಿಸಿಕೊಂಡರು ಎಂದರೆ ಸರಿ. ಅವುಗಳ ಪೈಕಿ ಎರಡು ವಿವೋ ಮೊಬೈಲ್ , ಒಂದು ಇನಪಿನಿಕ್ಸ, 3 ರೆಡಮಿ ಮೊಬೈಲ್ ಗಳು ಹಾಗೂ ಒಂದು ರಿಯಲ್ ಮಿ ಇದ್ದವು ಎಂದರೆ ಸರಿ. ಆ ದಿನ ಸದರಿ ಮೊಬೈಲ್ ಗಳನ್ನು ಹಾಜರು ಪಡಿಸಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿತರು ಇರುತ್ತಾರೆ ಎಂದರೆ ಸರಿ. ಅವರಲ್ಲಿ ನಾಲ್ಕು ಜನ ಆರೋಪಿತರು ಬಂದಿಲ್ಲ ಎಂದರೆ ಸರಿ. ಅವರನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಪಂಚನಾಮೆಗೆ ನನ್ನ ಹಾಗೂ ಚಾಸಾ.3 ರವರ ಬರೆದರು ಮತ್ತು ಓದಿ ಹೇಳಿದರು ಎಂದರೆ ಸರಿ.

ಪಾಟೀಸವಾಲುಃ ಆರೋಪಿ ನಂ**.3,4,6** ರವರಿಂದ

ನಿಪಿ.3 ನ್ನು ಬರೆಯಲು ಯಾರು ಮಾಹಿತಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಹಾಗಾಗಿ ನಿಪಿ.3 ರಲ್ಲಿ ಏನು ಬರೆದಿದಾರೆ ಎಂಬುದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಈ ಎಲ್ಲ ದಾಖಲೆಗಳಿಗೆ ಠಾಣೆಯಲ್ಲಿ ಸಹಿ ಪಡೆದಿದ್ದಾರೆ ಎಂದರೆ ಸರಿ.

ಸಿ.ಸಿ. ನಂಬರ್‌ಃ**3052/2023**
ಸಿ.ಡಬ್ಲ್ಯೂಃ**2** ಪಿ.ಡಬ್ಲ್ಯೂಃ**2**

ಪಾಟೀಸವಾಲುಃ **2,5** ಹಾಗೂ **8** ಮತ್ತು **9** ನೇ ಆರೋಪಿ ಪರ ವಕೀಲರು ಆರೋಪಿ ನಂ. **3,4,6** ರವರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.